## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | (522) 50 |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ |
| ಉತ್ತರಿಸುವ ದಿನಾಂಕ | : | 30-01-2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2023-24, 2024-25 ಮತ್ತು 2025-26ನೇ ಸಾಲಿನ ಡಿಸೆಂಬರ್ ಅಂತ್ಯದವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳ ಕಲ್ಯಾಣಕ್ಕಾಗಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಡಿ ಮೀಸಲಿಟ್ಟ ಅನುದಾನವೆಷ್ಟು; ಬಿಡುಗಡೆಯಾದ ಅನುದಾನವೆಷ್ಟು; | 2023-24, 2024-25 ಮತ್ತು 2025-26ನೇ ಆರ್ಥಿಕ ವರ್ಷದಲ್ಲಿ SCSP ಹಾಗೂ TSP ಅಡಿಯಲ್ಲಿ ಮೀಸಲಿಡಲಾದ, ಬಿಡುಗಡೆಯಾದ ಮತ್ತು ವೆಚ್ಚ ಮಾಡಿದ ಅನುದಾನದ ವಿವರಗಳನ್ನು ಹಾಗೂ ಗ್ಯಾರಂಟಿ ಯೋಜನೆಗಳಿಗೆ ಒದಗಿಸಲಾದ ಮೀಸಲಿಡಲಾದ, ಬಿಡುಗಡೆಯಾದ ಮತ್ತು ವೆಚ್ಚ ಮಾಡಿದ ಅನುದಾನದ ವಿವರ ಹಾಗೂ ಫಲಾನುಭವಿಗಳ ವಿವರಗಳನ್ನು **ಅನುಬಂಧ-01** ರಲ್ಲಿ ನೀಡಿದೆ. |
| ಆ) | ಈ ಅನುದಾನದಲ್ಲಿ ಎಷ್ಟು ಮೊತ್ತವನ್ನು ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಮೀಸಲಿರಿಸಿ, ಹಣವನ್ನು ವರ್ಗಾಯಿಸಿದೆ; ವರ್ಗಾಯಿಸಿದ ಅನುದಾನದಲ್ಲಿ ಎಷ್ಟು ಮೊತ್ತವನ್ನು ಬಳಕೆ ಮಾಡಲಾಗಿದೆ; (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು) | |
| ಇ) | ಮೇಲ್ಕಂಡ ಸಾಲಿನಲ್ಲಿ ಎಷ್ಟು ಮೊತ್ತವನ್ನು ಗ್ಯಾರಂಟಿ ಯೋಜನೆಗಳಲ್ಲಿ ಫಲಾನುಭವಿಗಳಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವೆಚ್ಚ ಮಾಡಲಾಗಿದೆ; ಪ್ರತಿಯೊಂದು ಗ್ಯಾರಂಟಿ ಯೋಜನೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಸಂಖ್ಯೆ ಎಷ್ಟು; (ಪ್ರತಿಯೊಂದು ಗ್ಯಾರಂಟಿ ಯೋಜನೆಯನುಸಾರ ಮಾಹಿತಿ ನೀಡುವುದು) | |
| ಈ) | ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗೆ ವರ್ಗಾಯಿಸಿದ್ದಲ್ಲಿ ಅದನ್ನು ಬಳಕೆ ಮಾಡಿಕೊಂಡಿದ್ದಲ್ಲಿ ಆ ಪಂಗಡದ ಫಲಾನುಭವಿಗಳ ಫಲಾನುಭವಿ ಆಗಿಲ್ಲದಿದ್ದರೆ, ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯ ಹಣವನ್ನು ದುರ್ಬಳಕೆ ಮಾಡಿಕೊಂಡಂತೆ ಆಗುವುದಿಲ್ಲವೇ; ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆಯ ಉಲ್ಲಂಘನೆಯಾಗುವುದಿಲ್ಲವೇ; ದಲಿತರ ಕಲ್ಯಾಣಕ್ಕೆ ಹಿನ್ನಡೆಯಾಗುವುದಿಲ್ಲವೇ; (ಮಾಹಿತಿ ನೀಡುವುದು) | ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಧಿನಿಯಮ 2013ರ ಸೆಕ್ಷನ್ 7 (ಸಿ) ಪ್ರಕಾರ ಸಾಮಾನ್ಯ ಸಾಮಾಜಿಕ ವಲಯದ ಕಾರ್ಯಕ್ರಮಗಳಿಗೆ ಹಂಚಿಕೆಯಾಗುವ ಅನುದಾನದಲ್ಲಿ ಎಸ್.ಸಿ/ಎಸ್.ಟಿ ಫಲಾನುಭವಿಗಳ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ಅನುದಾನವನ್ನು ಹಂಚಿಕೆ ಮಾಡಿ ಉಪಯೋಗಿಸಲು ಅವಕಾಶ ಇರುತ್ತದೆ. |

| | | |
|---|---|---|
| ಉ) | ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಬಳಕೆ ಮಾಡಿರುವ ಹಣವನ್ನು ಮತ್ತೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ವಿನಿಯೋಗ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ; | ಅದರಂತೆ ಪ್ರಾರಂಭದಿಂದಲೂ ಸದರಿ ಕಾಯ್ದೆಯ ಸೆಕ್ಷನ್ 7(ಸಿ) ಪ್ರಕಾರ ಶಿಕ್ಷಣ , ಆರೋಗ್ಯ, ಕೃಷಿ, ತೋಟಗಾರಿಕೆ, ನೀರಾವರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಯೋಜನಾ ಇಲಾಖೆ, ಇಂಧನ ಇಲಾಖೆ ಇತ್ಯಾದಿ ಇಲಾಖೆಗಳಲ್ಲಿ ಎಲ್ಲರಿಗೂ ಅನ್ವಯವಾಗುವ ಯೋಜನೆಗಳು ಜಾರಿಯಲ್ಲಿದ್ದು, ಸದರಿ ಯೋಜನೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳ ಸಮಗ್ರ ಅಭಿವೃದ್ಧಿಗಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ಅನುದಾನವನ್ನು ಹಂಚಿಕೆ ಮಾಡಿ ಉಪಯೋಗಿಸಲಾಗುತ್ತಿದೆ.<br><br>ಅದರಂತೆ ಸಾಮಾಜಿಕ ವಲಯದ ಸಾಮಾನ್ಯ ಯೋಜನೆಗಳಾದ ಗ್ಯಾರಂಟಿ ಯೋಜನೆಗಳಡಿ ಎಸ್.ಸಿ/ಎಸ್.ಟಿ ಫಲಾನುಭವಿಗಳ ಜನಸಂಖ್ಯೆಗೆ ಅನುಗುಣವಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಬಳಕೆ ಮಾಡಲಾಗುತ್ತಿದೆ. ಆದ್ದರಿಂದ ಅನುದಾನ ದುರ್ಬಳಕೆಯ ಪ್ರಶ್ನೆ ಉದ್ಭವಿಸುವುದಿಲ್ಲ ಹಾಗೂ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಕಾಯ್ದೆಯ ಉಲ್ಲಂಘನೆಯಾಗುವುದಿಲ್ಲ. |
| ಊ) | ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ನಿಗಮಗಳೆಷ್ಟು; ನಿಗಮಗಳಲ್ಲಿ ಜಾರಿಯಲ್ಲಿರುವ ಯೋಜನೆಗಳು ಯಾವುವು; 2021-22, 2022-23, 2023-24, 2024-25 ಮತ್ತು 2025-26 ನೇ ಸಾಲಿನಲ್ಲಿ ನಿಗಮಗಳಿಗೆ ಘೋಷಣೆಯಾದ ಮತ್ತು ಬಿಡುಗಡೆಯಾದ ಅನುದಾನವೆಷ್ಟು; ನಿಗಮದಲ್ಲಿ ಸಾರ್ವಜನಿಕರಿಗೆ ಲಭ್ಯವಿರುವ ಯೋಜನೆಗಳ ಅನುಸಾರ ಬಿಡುಗಡೆಯಾದ ಮೊತ್ತ ಮತ್ತು ಫಲಾನುಭವಿಗಳ ಸಂಖ್ಯೆ ಎಷ್ಟು; ವಿವಿಧ ಯೋಜನೆಗಳಲ್ಲಿ ಆಯ್ಕೆಯಾದ ಎಲ್ಲಾ ಫಲಾನುಭವಿಗಳಿಗೆ ಯೋಜನೆಯನ್ನು ತಲುಪಿಸಲಾಗಿದೆಯೇ? ಆರ್ಥಿಕ ವರ್ಷವಾರು ಪ್ರತ್ಯೇಕವಾಗಿ ಸಂಪೂರ್ಣ ಮಾಹಿತಿ ನೀಡುವುದು) | ಸಮಾಜ ಕಲ್ಯಾಣ ಇಲಾಖೆಯಡಿ ಒಟ್ಟು 07 ನಿಗಮಗಳು ಕಾರ್ಯ ನಿರ್ವಹಿಸುತ್ತಿವೆ. ಅವುಗಳೆಂದರೆ,<br>1. ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ.<br>2. ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ<br>3. ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ.<br>4. ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ.<br>5. ಡಾ. ಬಾಬು ಜಗಜೀವನರಾಂ ಕೈಗಾರಿಕಾ ಅಭಿವೃದ್ಧಿ ನಿಗಮ.<br>6. ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ.<br>7. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ. |

| | | |
|---|---|---|
| | | ಸದರಿ ನಿಗಮಗಳಲ್ಲಿ ಪರಿಶಿಷ್ಟ ಜಾತಿಯವರ ಅಭಿವೃದ್ಧಿಗಾಗಿ, ಸ್ವಯಂ ಉದ್ಯೋಗ ಯೋಜನೆ(ನೇರ ಸಾಲ), ಐ.ಎಸ್.ಬಿ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಸ್ವಾವಲಂಭಿ ಸಾರಥಿ ಯೋಜನೆ, ಭೂ ಒಡೆತನ ಯೋಜನೆ ಇತ್ಯಾದಿ ಆರ್ಥಿಕಾಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.<br><br>2021-22, 2022-23, 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ನಿಗಮಗಳಿಗೆ ಒದಗಿಸಿದ ಅನುದಾನದ ವಿವರಗಳ ಪ್ರಗತಿ ವರದಿಯನ್ನು **ಅನುಬಂಧ-02** ರಲ್ಲಿ ನೀಡಿದೆ.<br><br>ವಿವಿಧ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳು ಯೋಜನೆಯ ಮಾರ್ಗಸೂಚಿಗಳಂತೆ ಅರ್ಹರಿರುವ ಬಗ್ಗೆ ಪರಿಶೀಲಿಸಿಕೊಂಡು ಯೋಜನೆಯ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಬ್ಯಾಂಕ್ ಲಿಂಕ್ಡ್ ಯೋಜನೆಗಳಡಿ ಬ್ಯಾಂಕಿನಿಂದ ಸಾಲ ಮಂಜೂರಾದ ಕೂಡಲೇ ಸಹಾಯಧನದ ಮೊತ್ತವನ್ನು ಬ್ಯಾಂಕುಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. |

**ಸಕಇ 56 ಎಸ್‌ಎಲ್‌ಪಿ 2026**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ 522 ಕ್ಕೆ ಅನುಬಂಧ-01**

**ಕಳೆದ ಮೂರು ವರ್ಷಗಳಲ್ಲಿ SCSP- TSP ಗೆ ಹಂಚಿಕೆಯಾದ ಅನುದಾನದ ವಿವರಗಳು (ರೂ ಕೋಟಿಗಳಲ್ಲಿ)**

| ವರ್ಷ | ಹಂಚಿಕೆ | | | ಬಿಡುಗಡೆ | | | ವೆಚ್ಚ | | |
|---|---|---|---|---|---|---|---|---|---|
| | SCSP | TSP | ಒಟ್ಟು | SCSP | TSP | ಒಟ್ಟು | SCSP | TSP | ಒಟ್ಟು |
| 2023-24 | 25163.71 | 10058.13 | 35221.84 | 24524.16 | 9845.69 | 34369.85 | 24459.13 | 9786.63 | 34245.76 |
| 2024-25 | 28669.22 | 11288.55 | 39957.77 | 27852.97 | 10940.91 | 38793.88 | 27821.30 | 10896.44 | 38717.74 |
| 2025-26 | 29991.69 | 12025.82 | 42017.51 | 15,279.09 | 6,004.76 | 21283.85 | 13,058.74 | 4842.98 | 17901.72 |

**ಈ ಪೈಕಿ ಗ್ಯಾರಂಟಿ ಯೋಜನೆಗಳಿಗೆ ಒದಗಿಸಲಾದ ಅನುದಾನ ವಿವರಗಳು ಕೆಳಗಿನಂತಿದೆ. (ರೂ ಕೋಟಿಗಳಲ್ಲಿ)**

| ವರ್ಷ | ಗೃಹ ಲಕ್ಷ್ಮಿ ಯೋಜನೆ | | | | | | | | | | | |
|---|---|---|---|---|---|---|---|---|---|---|---|---|
| | ಹಂಚಿಕೆ | | | ಬಿಡುಗಡೆ | | | ವೆಚ್ಚ | | | ಫಲಾನುಭವಿಗಳ ಸಂಖ್ಯೆ | | |
| | SCSP | TSP | ಒಟ್ಟು | SCSP | TSP | ಒಟ್ಟು | SCSP | TSP | ಒಟ್ಟು | SC | ST | ಒಟ್ಟು |
| 2023-24 | 3500.00 | 1575.00 | 5075.00 | 3500.00 | 1575.00 | 5075.00 | 3500.00 | 1575.00 | 5075 | 21,87,500 | 8,66,983 | 30,54,483 |
| 2024-25 | 5879.85 | 2668.70 | 8548.55 | 5879.85 | 2668.70 | 8548.55 | 5879.85 | 2668.70 | 8548.55 | 22,16,816 | 8,87,433 | 31,04,249 |
| 2025-26 | 5364.00 | 2074.06 | 7438.06 | 1451.60 | 553.49 | 2005.09 | 1451.60 | 553.49 | 2005.09 | 23,35,197 | 9,14,025 | 32,49,222 |

## ಅನ್ನಭಾಗ್ಯ

| ವರ್ಷ | ಹಂಚಿಕೆ | | | ಬಿಡುಗಡೆ | | | ವೆಚ್ಚ | | | ಫಲಾನುಭವಿಗಳ ಸಂಖ್ಯೆ | | |
|---|---|---|---|---|---|---|---|---|---|---|---|---|
| | SCSP | TSP | ಒಟ್ಟು | SCSP | TSP | ಒಟ್ಟು | SCSP | TSP | ಒಟ್ಟು | SC | ST | ಒಟ್ಟು |
| 2023-24 | 1391.28 | 584.50 | 1975.78 | 1147.46 | 487.63 | 1635.09 | 1147.46 | 487.63 | 1635.09 | 60,01,209 | 26,27,989 | 86,29,198 |
| 2024-25 | 1154.39 | 486.30 | 1640.69 | 1154.39 | 486.30 | 1640.69 | 1114.58 | 475.10 | 1589.68 | 73,56,084 | 30,97,108 | 1,04,53,192 |
| 2025-26 | 1156.68 | 514.08 | 1670.76 | 804.91 | 341.09 | 1146.00 | 804.91 | 341.09 | 1146.00 | 65,54,530 | 28,75,924 | 94,30,454 |

## ಯುವನಿಧಿ

| ವರ್ಷ | ಹಂಚಿಕೆ | | | ಬಿಡುಗಡೆ | | | ವೆಚ್ಚ | | | ಫಲಾನುಭವಿಗಳ ಸಂಖ್ಯೆ | | |
|---|---|---|---|---|---|---|---|---|---|---|---|---|
| | SCSP | TSP | ಒಟ್ಟು | SCSP | TSP | ಒಟ್ಟು | SCSP | TSP | ಒಟ್ಟು | SC | ST | ಒಟ್ಟು |
| 2023-24 | 47.50 | 20.00 | 67.5 | 47.50 | 20.00 | 67.5 | 2.58 | 1.12 | 3.70 | 4,751 | 2,107 | 6,858 |
| 2024-25 | 41.46 | 13.00 | 54.46 | 41.46 | 13.00 | 54.46 | 54.06 | 22.79 | 76.85 | 32,112 | 12,890 | 45,002 |
| 2025-26 | 114.00 | 48.00 | 162.00 | 114.00 | 48.00 | 162.00 | 97.94 | 40.28 | 138.23 | 55,715 | 23,050 | 78,765 |

## ಗೃಹ ಜ್ಯೋತಿ

| ವರ್ಷ | ಹಂಚಿಕೆ | | | ಬಿಡುಗಡೆ | | | ವೆಚ್ಚ | | |
|---|---|---|---|---|---|---|---|---|---|
| | SCSP | TSP | ಒಟ್ಟು | SCSP | TSP | ಒಟ್ಟು | SCSP | TSP | ಒಟ್ಟು |
| 2023-24 | 1066.16 | 495.76 | 1561.92 | 1066.16 | 495.76 | 1561.92 | 1066.16 | 495.76 | 1561.92 |
| 2024-25 | 1678.90 | 773.31 | 2452.21 | 1678.90 | 773.31 | 2452.21 | 1678.90 | 773.31 | 2452.21 |
| 2025-26 | 1818.00 | 808.00 | 2626.00 | 1439.58 | 642.13 | 2081.71 | 1439.58 | 642.13 | 2081.71 |

2011 ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ 21.78 ಲಕ್ಷ ಪರಿಶಿಷ್ಟ ಜಾತಿಯ ಕುಟುಂಬ ಹಾಗೂ 8.76 ಲಕ್ಷ ಪರಿಶಿಷ್ಟ ಪಂಗಡದ ಕುಟುಂಬಗಳು ಇರುತ್ತವೆ. ಇಂಧನ ಇಲಾಖೆಯ ಗೃಹಜ್ಯೋತಿ ಯೋಜನೆಯಡಿ ಮಾಸಿಕ 200 ಯುನಿಟ್‌ಗಳಿಗಿಂತ ಕಡಿಮೆ ವಿದ್ಯುತ್ ಬಳಸುವ ಎಲ್ಲಾ ಕುಟುಂಬಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಒದಗಿಸಲಾಗುತ್ತಿದೆ. ಯೋಜನೆಯ ಸೌಲಭ್ಯ ಪಡೆದ ಪ.ಜಾತಿ ಮತ್ತು ಪ.ಪಂಗಡದ ಕುಟುಂಬಗಳ ನಿಖರ ಅಂಕಿ ಅಂಶಗಳನ್ನು ನೀಡಲು ಇಂಧನ ಇಲಾಖೆಯನ್ನು ಕೋರಲಾಗಿರುತ್ತದೆ.

**ಶಕ್ತಿ**

| ವರ್ಷ | ಹಂಚಿಕೆ | | | ಬಿಡುಗಡೆ | | | ವೆಚ್ಚ | | |
|---|---|---|---|---|---|---|---|---|---|
| | SCSP | TSP | ಒಟ್ಟು | SCSP | TSP | ಒಟ್ಟು | SCSP | TSP | ಒಟ್ಟು |
| 2023-24 | 640.000 | 288.00 | 928.00 | 640.00 | 288.00 | 928.00 | 640.00 | 288.00 | 928.00 |
| 2024-25 | 1001.00 | 450.45 | 1451.45 | 1001.00 | 450.45 | 1451.45 | 1001.00 | 450.45 | 1451.45 |
| 343.60 | 1060.00 | 477.00 | 1537.00 | 763.57 | 343.60 | 1107.17 | 763.57 | 343.60 | 1107.17 |

2011 ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ 52 ಲಕ್ಷ ಪರಿಶಿಷ್ಟ ಜಾತಿಯ ಮತ್ತು 21 ಲಕ್ಷ ಪರಿಶಿಷ್ಟ ಪಂಗಡದ ಮಹಿಳೆಯರು ಇರುತ್ತಾರೆ.

ಸಾರಿಗೆ ಇಲಾಖೆಯಿಂದ ನೀಡಿರುವ ಮಾಹಿತಿಯಂತೆ ಶಕ್ತಿ ಯೋಜನೆಯಡಿ 2023-24ನೇ ಸಾಲಿನಲ್ಲಿ 183 ಕೋಟಿ ಸಂಖ್ಯೆಯ, 2024-25ನೇ ಸಾಲಿನಲ್ಲಿ 244.65 ಕೋಟಿ ಹಾಗೂ 2025-26ನೇ ಸಾಲಿನಲ್ಲಿ 183.25 ಕೋಟಿ ಸಂಖ್ಯೆಯ ಉಚಿತ ಟಿಕೇಟ್‌ಗಳನ್ನು ಮಹಿಳಾ ಪ್ರಯಾಣಿಕರಿಗೆ ನೀಡಲಾಗಿದೆ. ಅದರಲ್ಲಿ ಎಸ್. ಸಿ. /ಎಸ್ ಟಿ. ಮಹಿಳೆಯರು ಸಹ ಸೇರಿರುತ್ತಾರೆ. ಯೋಜನೆಯ ಸೌಲಭ್ಯ ಪಡೆದ ಪ.ಜಾತಿ ಮತ್ತು ಪ.ಪಂಗಡದ ಮಹಿಳೆಯರ ನಿಖರ ಅಂಕಿ ಅಂಶಗಳನ್ನು ನೀಡಲು ಸಾರಿಗೆ ಇಲಾಖೆಯನ್ನು ಕೋರಲಾಗಿರುತ್ತದೆ

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಹೇಮಲತ ನಾಯಕ ಇವರ ಚುಕ್ಕೆ ಗುರುತಿನ ಪ್ರಶ್ನೆ 522**

**ಅನುಬಂಧ-02**

**2021-22** (ರೂ. ಕೋಟಿಗಳಲ್ಲಿ)

| ಕ್ರ. ಸಂ. | ನಿಗಮ | ಹಂಚಿಕೆ ಮಾಡಿದ ಅನುದಾನ | ಬಿಡುಗಡೆ ಮಾಡಿದ ಅನುದಾನ | ಭೌತಿಕ ಸಾಧನೆ |
|---|---|---|---|---|
| 1 | ಡಾ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ | 73.00 | 73.00 | 10041 |
| 2 | ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ | 65.00 | 65.00 | 9609 |
| 3 | ಕರ್ನಾಟಕ ಬೋವಿ ಅಭಿವೃದ್ಧಿ ನಿಗಮ | 40.00 | 40.00 | 0 |
| 4 | ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ | 50.00 | 50.00 | 5500 |
| 5 | ಕರ್ನಾಟಕ ಸಫಾಯಿ ಅಭಿವೃದ್ಧಿ ನಿಗಮ | 30.00 | 30.00 | 5722 |
| 6 | ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ | 50.00 | 50.00 | 4887 |
| 7 | ಡಾ ಬಾಬು ಜಗಜೀವನ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ | 35.00 | 35.00 | 21528 |
| | **ಒಟ್ಟು** | **343.00** | **343.00** | **57287** |

**2022-23 (ರೂ ಕೋಟಿಗಳಲ್ಲಿ)**

| ಕ್ರ. ಸಂ | ನಿಗಮ | ಹಂಚಿಕೆ ಮಾಡಿದ ಅನುದಾನ | ಬಿಡುಗಡೆ ಮಾಡಿದ ಅನುದಾನ | ಭೌತಿಕ ಸಾಧನೆ |
|---|---|---|---|---|
| 1 | ಡಾ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ | 218.50 | 219.75 | 7223 |
| 2 | ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ | 148.69 | 148.69 | 7110 |
| 3 | ಕರ್ನಾಟಕ ಬೋವಿ ಅಭಿವೃದ್ಧಿ ನಿಗಮ | 103.48 | 103.48 | 855 |
| 4 | ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ | 133.50 | 133.50 | 9968 |
| 5 | ಕರ್ನಾಟಕ ಸಫಾಯಿ ಅಭಿವೃದ್ಧಿ ನಿಗಮ | 55.00 | 55.00 | 5063 |
| 6 | ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ | 50.00 | 50.00 | 160 |
| 7 | ಡಾ ಬಾಬು ಜಗಜೀವನ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ | 60.00 | 60.00 | 3983 |
| | **ಒಟ್ಟು** | **769.17** | **770.42** | **34362** |

| 2023-24 (ರೂ ಕೋಟಿಗಳಲ್ಲಿ) | | | | |
|---|---|---|---|---|
| ಕ್ರ. ಸಂ | ನಿಗಮ | ಹಂಚಿಕೆ ಮಾಡಿದ ಅನುದಾನ | ಬಿಡುಗಡೆ ಮಾಡಿದ ಅನುದಾನ | ಭೌತಿಕ ಸಾಧನೆ |
| 1 | ಡಾ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ | 107.00 | 107.00 | 6912 |
| 2 | ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ | 105.00 | 105.00 | 4067 |
| 3 | ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ | 55.00 | 70.00 | 266 |
| 4 | ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ | 66.95 | 73.95 | 2004 |
| 5 | ಕರ್ನಾಟಕ ಸಫಾಯಿ ಅಭಿವೃದ್ಧಿ ನಿಗಮ | 40.00 | 40.00 | 5785 |
| 6 | ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ | 42.25 | 42.25 | 544 |
| 7 | ಡಾ ಬಾಬು ಜಗಜೀವನ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ | 37.00 | 37.00 | 1688 |
| ಒಟ್ಟು | | 453.20 | 475.20 | 21266 |

| 2024-25 (ರೂ ಕೋಟಿಗಳಲ್ಲಿ) | | | | |
|---|---|---|---|---|
| ಕ್ರ. ಸಂ | ನಿಗಮ | ಹಂಚಿಕೆ ಮಾಡಿದ ಅನುದಾನ | ಬಿಡುಗಡೆ ಮಾಡಿದ ಅನುದಾನ | ಭೌತಿಕ ಸಾಧನೆ |
| 1 | ಡಾ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ | 215.00 | 215.00 | 7424 |
| 2 | ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ | 89.00 | 89.00 | 6131 |
| 3 | ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ | 65.00 | 65.00 | 1381 |
| 4 | ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ | 77.75 | 77.75 | 3586 |
| 5 | ಕರ್ನಾಟಕ ಸಫಾಯಿ ಅಭಿವೃದ್ಧಿ ನಿಗಮ | 40.00 | 40.00 | 2594 |
| 6 | ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ | 35.00 | 35.00 | 1559 |
| 7 | ಡಾ ಬಾಬು ಜಗಜೀವನ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ | 36.00 | 36.00 | 223 |
| ಒಟ್ಟು | | 557.75 | 557.75 | 22898 |

| 2025-26 (ರೂ ಕೋಟಿಗಳಲ್ಲಿ) | | | | |
|---|---|---|---|---|
| ಕ್ರ. ಸಂ | ನಿಗಮ | ಹಂಚಿಕೆ ಮಾಡಿದ ಅನುದಾನ | ಬಿಡುಗಡೆ ಮಾಡಿದ ಅನುದಾನ | ಭೌತಿಕ ಸಾಧನೆ |
| 1 | ಡಾ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ | 155.00 | 89.73 | 5013 |
| 2 | ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ | 220.60 | 93.12 | 5368 |
| 3 | ಕರ್ನಾಟಕ ಬೋವಿ ಅಭಿವೃದ್ಧಿ ನಿಗಮ | 93.75 | 68.81 | 3108 |
| 4 | ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ | 100.00 | 73.55 | 3566 |
| 5 | ಕರ್ನಾಟಕ ಸಫಾಯಿ ಅಭಿವೃದ್ಧಿ ನಿಗಮ | 51.25 | 29.63 | 2619 |
| 6 | ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ | 50.00 | 35.00 | 1208 |
| 7 | ಡಾ ಬಾಬು ಜಗಜೀವನ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ | 45.75 | 23.38 | 498 |
| ಒಟ್ಟು | | 716.35 | 413.22 | 21380 |